<u>ಸಿಸಿ ಸಂಖ್ಯೆ: **-1418/2025**</u>

ಪಿ.ಡಬ್ಲ್ಯೂ **:-1-**ಶ್ರೀಮತಿ.ರತ್ನಮ್ಮ

ದಿನಾಂಕ: **17-06-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು **:-** ಆರೋಪಿ ಪರ ವಕೀಲರಾದ ಶ್ರೀ.ಸಿ ಎಂ ವಕೀಲರಿಂದ **:-**</u>

1. ನಾನು ಮೂಲತಃ ಕುಂದೂರು ಗ್ರಾಮದವಳು ಇದ್ದು ಈಗ ಕಳೆದ 19 ವರ್ಷಗಳಿಂದ ನಾನು ಹೊನ್ನಾಳಿಯ ಖಾಯಂ ನಿವಾಸಿ ಇರುತ್ತೇನೆ. ನಾನು ಈ ಹಿಂದೆ ಹೊನ್ನಾಳಿಯ ದುರ್ಗಿಗುಡಿ 9 ನೇ ಅಡ್ಡ ರಸ್ತೆಯಲ್ಲಿ ವಾಸವಾಗಿದ್ದೆನು ಆದರೆ ಈಗ ಅಂದರೆ 2017 ನೇ ಸಾಲಿನಿಂದ ಸುಂಕದಕಟ್ಟೆ ರಸ್ತೆಯಲ್ಲಿ ಮನೆ ಕಟ್ಟಿಸಿಕೊಂಡು ಅಲ್ಲಿಯೇ ವಾಸವಿರುತ್ತೇನೆ.

2. ನಾನು ಗೃಹಿಣಿ ಇರುತ್ತೇನೆ. ನನ್ನ ಪತಿಯು ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರಿರುತ್ತಾರೆ. ಆರೋಪಿತನನ್ನು ನಾನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆತನು ಅವರಿಗೆ ಕಳೆದ 12 ವರ್ಷಗಳಿಂದ ಪರಿಚಯವಿರುವ ಬಗ್ಗೆ ನುಡಿಯುತ್ತಾರೆ. ಆರೋಪಿತನು ದುರ್ಗಿಗುಡಿಯ 10 ನೇ ಕ್ರಾಸ್ ನಲ್ಲಿ ವಾಸವಿರುತ್ತಾರೆ. ಆರೋಪಿತನು ಏನು ಉದ್ಯೋಗ ಮಾಡುತ್ತಾನೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

3. ಆರೋಪಿತು ನಿಮಗೆ ಹೇಗೆ ಪರಿಚಯ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ತಾನು ಮತ್ತು ಆರೋಪಿತನು ದುರ್ಗಿಗುಡಿಯ 9 ಮತ್ತು 10 ನೇ ಕ್ರಾಸ್ ನಲ್ಲಿ ಬಹಳ ವರ್ಷಗಳಿಂದ ವಾಸವಾಗಿದ್ದರಿಂದ ಅವರ ಅಳಿಯನಾದ ರಾಜು ಈತನ ಮೂಲಕ ಆರೋಪಿತನು ಪರಿಚಯವಾಗಿದ್ದಾಗಿ ನುಡಿಯುತ್ತಾರೆ. ನನಗೆ ಪವಿತ್ರ ಮತ್ತು ಪ್ರಿಯಾಂಕ ಎನ್ನುವ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಅವರದು ಈಗಾಗಲೇ ಮದುವೆಯಾಗಿರುತ್ತದೆ. ಸದರಿ ರಾಜು ಈತನು ನನ್ನ ಹಿರಿಯ ಮಗಳ ಗಂಡನಿರುತ್ತಾನೆ.

4. ನನ್ನ ಅಳಿಯ ರಾಜು ಈತನು ಲೆಕ್ಕಪರಿಶೋಧನೆಯ ಕೆಲಸ ಮಾಡುತ್ತಾನೆ. ಆರೋಪಿತನು 2024 ರ ನವೆಂಬರ್ ತಿಂಗಳಿನಲ್ಲಿ ನನ್ನನ್ನು ಭೇಟಿಯಾಗಿದ್ದರು ಆದರೆ ನನಗೆ ನಿರ್ದಿಷ್ಟ ದಿನಾಂಕ ನೆನಪಿಲ್ಲ. ಆರೋಪಿತನು ನೇರವಾಗಿ ನಮ್ಮ ಮನೆಗೆ ಬಂದು ತನ್ನ ಹಣಕಾಸಿಂ ಅಡಚಣೆಗಾಗಿ ಕೈಗಡ ಸಾಲವನ್ನು ಕೊಡುವಂತೆ ನನ್ನನ್ನು ಕೇಳಿದ್ದನು. ಆ ಸಂದರ್ಭದಲ್ಲಿ ಮನೆಯಲ್ಲಿ ನಾನು ಒಬ್ಬಳೇ ಇದ್ದೆನು. ನಾನು ಆಧರಿಸುವಂತೆ ಆರೋಪಿತನು 2024 ರ ನವೆಂಬರ್ ತಿಂಗಳಿನಲ್ಲಿ ನಮ್ಮ ಮನೆಗೆ ಬಂದು ನನ್ನ ಬಳಿ ಕೈಗಡ ಸಾಲ ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

5. ಆರೋಪಿತನು ನನ್ನ ಬಳಿ ಬಂದು ರೂ.1,50,000/- ಗಳನ್ನು ಕೈಗಡ ಸಾಲವಾಗಿ ಕೇಳಿದ್ದನು. ಆದರೆ ನನ್ನ ಬಳಿ ರೂ.1,25,000/- ಮಾತ್ರ ಇದುದ್ದರಿಂದ ಅಷ್ಟು ಹಣವನ್ನು ಮಾತ್ರ ನಾನು ಆರೋಪಿತನಿಗೆ ಸಾಲವಾಗಿ ಕೊಟ್ಟಿದ್ದೆನು . ಆ ಹಣವನ್ನು ಆರೋಪಿತನು 3 ತಿಂಗಳ ಒಳಗಾಗಿ ನನಗೆ ಮರುಪಾವತಿಸುವುದಾಗಿ ತಿಳಿಸಿದ್ದನು ಮತ್ತು ಆತನು ನನ್ನಿಂದ ಹಣ ಪಡೆದಿರುವ ಸಂಗತಿಯನ್ನು ನನ್ನ ಅಳಿಯನಾದ ರಾಜು ಈತನಿಗೆ ತಿಳಿಸದಂತೆ ನನಗೆ ಕೋರಿಕೊಂಡಿದ್ದನು.

6. ಆ ದಿನ ಆರೋಪಿತನಿಗೆ ನಾನು ಯಾವ ಮುಖ ಬೆಲೆಯ ಎಷ್ಟು ನೋಟುಗಳ ಮೂಲಕ ಹಣ ಕೊಟ್ಟಿದ್ದೆನು ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ನನ್ನ ಪತಿಯು ಸರ್ಕಾರಿ ನೌಕರನಿದ್ದು ಮತ್ತು ಅವರಿಗೆ ಸಂಬಂಧಿಸಿದ ಒಂದು ಕೃಷಿ ಜಮೀನನ್ನು ಮಾರಾಟ ಮಾಡಿದ್ದರಿಂದ ಬಂದ ಹಣವನ್ನು ಮನೆಯಲ್ಲಿಯೇ ಉಳಿತಾಯ ಮಾಡಿ ಇಟ್ಟಿದ್ದರಿಂದ ಅದೇ ಹಣವನ್ನು ನಾನು ಆರೋಪಿತನಿಗೆ ಕೈಗಡ ಸಾಲವಾಗಿ ಕೊಟ್ಟಿದ್ದೆನು.

7. ಆರೋಪಿತನು ಆ ದಿನ ಬೆಳಗ್ಗೆ 11-00 ರಿಂದ 11-30 ಗಂಟೆಯ ಸುಮಾರಿಗೆ ಹಣ ಕೇಳಿಕೊಂಡು ನಮ್ಮ ಮನೆಗೆ ಬಂದಿದ್ದನು. ಇದಕ್ಕಿಂತ ಪೂರ್ವದಲ್ಲಿ ನಾನು ಆರೋಪಿತನೊಂದಿಗೆ ಹಣ ಕೊಡುವ ಅಥವಾ ತೆಗೆದುಕೊಳ್ಳುವ ವ್ಯವಹಾರ ಮಾಡಿರುವುದಿಲ್ಲ. ಆರೋಪಿತನು ತನ್ನ ಕುಟುಂಬದಲ್ಲಿ ಹಣಕಾಸಿನ ಅಡಚಣೆ ಇರುವುದಾಗಿ ಮತ್ತು ಆ ಕಾರಣದಿಂದ ಆತನಿಗೆ ತುರ್ತಾಗಿ ಹಣದ ಅವಶ್ಯಕತೆ ಇದೆ ಎಂದು ನನಗೆ ತಿಳಿಸಿ ಹಣ ಪಡೆದುಕೊಂಡಿದ್ದನು.

8. ನನ್ನ ಫಿರ್ಯಾಧಿಯಲ್ಲಿ ಆರೋಪಿತನು House hold security ಉದ್ದೇಶಕ್ಕಾಗಿ ಹಣ ಪಡೆದುಕೊಂಡಿದ್ದನು ಎಂದು ನಾನು ಮಾಹಿತಿ ನೀಡಿರಲಿಲ್ಲ ಬದಲಾಗಿ ಆತನ ಕುಟುಂಬದ ಅವಶ್ಯಕತೆಗಾಗಿ ಹಣ ಪಡೆದುಕೊಂಡಿದ್ದನು ಎಂದು ತಿಳಿಸಿದ್ದೆನು. ಆ ರೀತಿ ಆರೋಪಿತನಿಗೆ ಯಾವುದೇ ಹಣದ ಅವಶ್ಯಕತೆ ಇರಲಿಲ್ಲ, ಆದ್ದರಿಂದ ಆತನು ನನ್ನ ಬಳಿ ಎಂದಿಗೂ ಕೈಗಡ ಸಾಲ ಕೇಳಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಿದ್ದರೆ ಫಿರ್ಯಾಧಿಯಲ್ಲಿ ಆ ರೀತಿ ನಮೂದಿಸಿರುವುದು ತಪ್ಪು ಇರುತ್ತದೆಯೇ ಎಂದರೆ ಸಾಕ್ಷಿಯು ಆ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

9.ಆರೋಪಿತನು ತಾನು ಒಪ್ಪಿಕೊಂಡ ಪ್ರಕಾರ 3 ತಿಂಗಳ ಅವಧಿಯಲ್ಲಿ ನನಗೆ ಹಣ ಮರುಪಾವತಿಸಿರಲಿಲ್ಲ ಆ ಕಾರಣ ನಾನು ಹಣ ಮರುಪಾವತಿಸುವಂತೆ ಆತನಿಗೆ ಹಲವು ಬಾರಿ ಒತ್ತಾಯಿಸಿದ್ದೆನು, ಆದರೆ ಯಾವ ಯಾವ ದಿನಾಂಕಗಳಂದು ನಾನು ಆರೋಪಿತನನ್ನು ಭೇಟಿಯಾಗಿದ್ದೆನು ಎಂದು ಈಗ ನನಗೆ ನೆನಪಿಲ್ಲ. ಅಂತಿಮವಾಗಿ ಯಾವ ದಿನಾಂಕದಂದು ನಾನು ಆರೋಪಿತನನ್ನು ಭೇಟಿಯಾಗಿದ್ದೆನು ಎಂದು ಈಗ ನನಗೆ ನೆನಪಿಲ್ಲ ಆದರೆ ಆರೋಪಿತನು ರೂ.1,25,000/- ಗಳನ್ನು ನಮೂದಿಸಿ ಚೆಕ್ಕನ್ನು ಕೊಟ್ಟು ಹೋಗಿದ್ದನು. ಆದರೆ ಯಾವ ದಿನಾಂಕದಂದು ಆ ಚೆಕ್ಕನ್ನು ಕೊಟ್ಟಿದ್ದನು ಎಂದು ಈಗ ನನಗೆ ನೆನಪಿಲ್ಲ. ನಾನು ಆಧರಿಸುವಂತೆ ಆರೋಪಿತನು ಎಂದಿಗೂ ನನಗೆ ಯಾವುದೇ ಚೆಕ್ಕನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

10. ಆರೋಪಿತನು ಪದವಿಧರ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಆತನು ಸೋಲಾರ್ ಎಂಟರ್ ಪ್ರೈಸಸ್ ಎಂದು ಸ್ವಂತ ಉದ್ಯೋಗ ಮಾಡುತ್ತಾನೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಆತನು ಕಂಪನಿಯ ವತಿಯಿಂದ ಮನೆ ಮನೆಗಳಿಗೆ ಸೋಲಾರ್ ಉಪಕರಣಗಳನ್ನು ಅಳವಡಿಸುತ್ತಿದ್ದನು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ.

11. ಆತನು ತನ್ನ ವ್ಯವಹಾರದ ಕುರಿತು ಪ್ರತಿವರ್ಷವು ಲೆಕ್ಕಪರಿಶೋಧನೆ ವರದಿಪಡೆದುಕೊಳ್ಳುತ್ತಾನೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ಕಾರಣ ಆ ರೀತಿ ಲೆಕ್ಕಪರಿಶೋಧನೆಗಾಗಿ ಕಚೇರಿಗೆ ಹೋದಾಗ ಅಲ್ಲಿ ನನ್ನ ಅಳಿಯನಾದ ರಾಜು ಈತನು ಕೆಲಸ

ಮಾಡುತ್ತಿದ್ದನು ಎಂದರೆ ಸರಿ. ಆ ಕಾರಣದಿಂದ ನನ್ನ ಅಳಿಯ ಮತ್ತು ಆರೋಪಿ ಪರಿಚಯಸ್ಥರಾಗಿದ್ದರು ಎಂದರೆ ಸರಿ.

12. ಆರೋಪಿತನು ನನಗೆ ಚೆಕ್ಕ್ ಕೊಟ್ಟ ನಂತರ ಅದನ್ನು ನಗದೀಕರಣಕ್ಕಾಗಿ ನನ್ನ ಬ್ಯಾಂಕ್ ಖಾತೆ ಇರುವ ಹೊನ್ನಾಳಿಯ ಎಸ್ ಬಿ ಐ ಶಾಖೆಗೆ ಹಾಜರುಪಡಿಸಿದಾಗ ಆರೋಪಿತನ ಬ್ಯಾಂಕ್ ಖಾತೆಯು ಅಕೌಂಟ್ ಬ್ಲಾಕ್ಡ್ ಎಂದು ನನಗೆ ತಿಳಿಸಿದ್ದರು. ಆ ರೀತಿ ಚೆಕ್ಕನ್ನು ಯಾವ ದಿನಾಂಕದಂದು ಬ್ಯಾಂಕ್ ಗೆ ಹಾಜರುಪಡಿಸಿದ್ದೆನು ಎಂದು ಮತ್ತು ಆ ಚೆಕ್ಕು ಅಮಾನ್ಯಗೊಂಡ ಕುರಿತು ಯಾವ ದಿನಾಂಕದಂದು ಬ್ಯಾಂಕ್ ರವರು ಹಿಂಬರಹ ಕೊಟ್ಟಿದ್ದರು ಎಂದು ನನಗೆ ಈಗ ನೆನಪಿಲ್ಲ.

13. ನಾನು ಆಧರಿಸುವಂತೆ ಆರೋಪಿತನು ನನಗೆ ಯಾವುದೇ ಚೆಕ್ಕು ಕೊಟ್ಟಿರುವುದಿಲ್ಲ ಬದಲಾಗಿ ಆತನು ನನ್ನ ಅಳಿಯನಾದ ರಾಜು ಈತನಿಗೆ ಕೊಟ್ಟಿದ್ದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ನಾನು ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಕೊಟ್ಟಿದ್ದ ಚೆಕ್ಕು ಹೆಚ್ ಡಿ ಎಫ್ ಸಿ ಬ್ಯಾಂಕ್ ಸಂಬಂಧಿಸಿದ್ದಾಗಿತ್ತು.

14. ನಿಪಿ-1 ರ ಚೆಕ್ಕು ಅಮಾನ್ಯಗೊಂಡ ನಂತರ ಆ ವಿಷಯವನ್ನು ನಾನು ಆರೋಪಿತನಿಗೆ ತಿಳಿಸಿದ್ದೆನು ಆದರೆ ಆತನು ಹಣ ಮರುಪಾವತಿಗಾಗಿ ನಾನು ಆತನ ಮನೆಯ ಮುಂದೆ ಗದ್ದಲ ಮಾಡಿ ಅವಮಾನ ಮಾಡಿದ ಕಾರಣದಿಂದ ಆ ರೀತಿ ಮಾಡಿದ್ದಾಗಿ ತಿಳಿಸಿದ್ದರಿಂದ ಮತ್ತು ತನ್ನ ಬಳಿ ಹಣ ಇದ್ದಾಗ ವಾಪಾಸ್ಸು ಕೊಡುವುದಾಗಿ ತಿಳಿಸಿದ್ದರಿಂದ ನಾನು ಈ ಪ್ರಕರಣ ದಾಖಲಿಸಿರುತ್ತೇನೆ.

15. ಚೆಕ್ಕು ಅಮಾನ್ಯಗೊಂಡ ನಂತರ ಮತ್ತು ಈ ಪ್ರಕರಣ ದಾಖಲಿಸುವ ಮಧ್ಯದಲ್ಲಿ ಏನು ಮಾಡಿರುತ್ತೇನೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಎಸ್ ಎಸ್ ಎಲ್ ಸಿ ವರೆಗೆ ಶಿಕ್ಷಣ ಪಡೆದಿರುತ್ತೇನೆ. ನಾನು ಅಷ್ಟಾಗಿ ಬ್ಯಾಂಕ್ ವ್ಯವಹಾರವನ್ನು ಮಾಡುವುದಿಲ್ಲ, ನನ್ನ ಪತಿಯೇ ನನ್ನ ಜೊತೆ ಬಂದು ಬ್ಯಾಂಕ್ ವ್ಯವಹಾರ ಮಾಡುತ್ತಾರೆ. ಯಾವ ಕಾರಣಕ್ಕಾಗಿ ಅಕೌಂಟ್ ಬ್ಲಾಕ್ಡ್ ಆಗುತ್ತದೆ ಎಂದು ನನಗೆ ಮಾಹಿತಿ ಇಲ್ಲ.

16. ಆ ರೀತಿ ಅಕೌಂಟ್ ಬ್ಲಾಕ್ಡ್ ಆಗಿರುತ್ತದೆ ಎಂದು ನಾನು ಬ್ಯಾಂಕ್ ಗೆ ಸಂಪರ್ಕಿಸಿ ವಿಚಾರಿಸಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.